ಶ್ರೀ ಎಂ. ನಾಗಪ್ಪ.—ಸ್ವಾಮಿ, ಈಗ ರಾಯಚೂರುಡಿಸ್ಟ್ರಿಕ್ಟು ದೇಶದಲ್ಲಿ ಪ್ರಮುಖ ವ್ಯಾಪಾರ ಸ್ಥಳವಾಗಿದೆ. ಕೋಕನೆಟ್ ಮತ್ತು ಗ್ರೌಂಡ್‌ನೆಟ್‌ಗೆ ನಮ್ಮ ಜಿಲ್ಲೆ ದೇಶದ ಮೂರನೆ ಮಾರ್ಕೆಟ್ ಅಂದರೆ ತುಂಬ ದೊಡ್ಡ ಮಾರ್ಕೆಟ್ ಆಗಿದೆ. ಮತ್ತು ಕೋಆಪರೇಟಿವ್ ಯಾರನ್ ಮಿಲ್ ಇವೆರ್ನಾ ಇವೆ. ಇದು ವ್ಯಾಪಾರದ ಮುಖ್ಯಕೇಂದ್ರವಾಗಿದೆ. ಈ ದೃಷ್ಟಿಯಿಂದ ನಾನು ಹೇಳುವುದು ಇದನ್ನು ಡೆವಲಪ್ ಮಾಡುವುದಕ್ಕೆ ಕೇಂದ್ರ ಸರ್ಕಾರದವರ ಕೈಯಲ್ಲಿ ಆಗದಿದ್ದರೆ ರಾಜ್ಯಸರ್ಕಾರದವರಾದರೂ ಕೂಡ ಈ ಏರ್ ಸ್ಟ್ರಿಪ್‌ನ್ನು ಡೆವಲಪ್ ಮಾಡುವುದಕ್ಕೆ ಸಾಧ್ಯವಿದೆ. ಇದಕ್ಕೆ ಹೆಚ್ಚು ಖರ್ಚಾಗುವುದಿಲ್ಲ. 65 ಲಕ್ಷ ರೂಪಾಯಿ ಒಳಗಡೆ ಆಗುತ್ತದೆ. ಅದುದರಿಂದ ಇದರ ಬಗ್ಗೆ ರಾಜ್ಯ ಸರ್ಕಾರದವರು ಖರ್ಚು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಿ ಪಿ.—ಇಲ್ಲಿಯವರೆಗೆ ಯಾವ ಏರ್‌ಸ್ಟ್ರಿಪ್‌ನ್ನೂ ಕೂಡ ರಾಜ್ಯಸರ್ಕಾರದವರು ಕೈಗೊಂಡಿಲ್ಲ. ಮತ್ತು ಮುಖ್ಯವಾಗಿ ಯಾವ ಏರ್‌ಕ್ರಾಫ್ಟ್‌ನ್ನೂ ರಾಜ್ಯಸರ್ಕಾರ ಇಟ್ಟುಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರು ಹೇಳುವುದನ್ನೇನೋ ಒಪ್ಪುತ್ತೇನೆ. ಆದರೆ ಕೇಂದ್ರ ಸರ್ಕಾರದವರು ಟ್ರಾಫಿಕ್ ಪೊಟೆನ್ಷಿಯರ್ ಇದ್ದರೆ ಮಾತ್ರ ಇಂಪ್ರೂವ್ ಮಾಡುತ್ತಾರೆ ಟ್ರಾಫಿಕ್ ಪೊಟನ್ಷಿಯರ್ ಇಲ್ಲದೆ ಇದ್ದರೆ ಅದನ್ನು ರೂಟ್ ಮಾಡುವುದಕ್ಕೆ ಒಪ್ಪಿಕೊಳ್ಳುವುದಿಲ್ಲ. ಅದುದರಿಂದ ಇದರ ಬಗ್ಗೆ ರಾಜ್ಯ ಸರ್ಕಾರದವರು ಖರ್ಚು ಮಾಡುವುದಿಲ್ಲ ಮತ್ತು ಕೇಂದ್ರ ಸರ್ಕಾರದವರೂ ಕೂಡ ಟ್ರಾಫಿಕ್ ಪೊಟೆನ್ಷಿಯರ್ ಇಲ್ಲದೆ ಇದ್ದರೆ ಅದನ್ನು ತೆಗೆದುಕೊಳ್ಳುವುದಿಲ್ಲ.

Sri BAPU GOUDA.—May I know whether Government has any proposal to have an air strip at Gulbarga.

Mr. SPEAKER.—That question does not arise.

ಶ್ರೀ ಎಂ. ನಾಗಪ್ಪ.—ಸ್ವಾಮಿ, ತಾವು ಈ ಏರೋಡ್ರೊಮ್ ಬಗ್ಗೆ ಅವರಿಗೆ ಟ್ರಾಫಿಕ್ ಪೊಟೆನ್ಷಿಯಲ್ ಇದ್ದರೆ ಮಾತ್ರ ಅವರು ಇದನ್ನು ಇಂಪ್ರೂವ್ ಮಾಡತ್ತಾರೆ ಎಂದು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಟೂರ್ ಹಾಕಿದ್ದಾಗ ಇಂಡಿಯನ್ ಏರ್ ಲೈನಿನವರು ತಮ್ಮ ಪ್ಲೇನ್‌ನನ್ನು ಇಳಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಕ್ಕೆ ಅವರ ಟೂರನ್ನೇ ಕ್ಯಾನ್ಸಲ್ ಮಾಡಿದರು. ಅದುದರಿಂದ ಇದನ್ನು ಫೆನ್ಸ್‌ಮಾಡಿ ಡೆವಲಪ್ ಮಾಡಿ ಎರಡು ರೂಮನ್ನು ಕಟ್ಟಿ ಸರಿಯಾಗಿ ಅನುಕೂಲ ಮಾಡಿಕೊಟ್ಟರೆ ಆ ವಿಮಾನಗಳನ್ನು ಇಲ್ಲಿ ಇಳಿಸುವುದಕ್ಕೆ ಅನುಕೂಲವಾಗುವುದಿಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಮುಖ್ಯಮಂತ್ರಿಗಳೇ ಬರಲಿ, ಯಾರೇ ಬರಲಿ ಇಂಡಿಯಾದ ಎರಲೈನ್ಸ್‌ನವರು ಅವರ ವಿಮಾನಗಳನ್ನು ಅಲ್ಲಿ ಇಳಿಸಲು ಒಪ್ಪಿಕೊಳ್ಳಬೇಕು. ಅವರು ಒಪ್ಪಿದ ಹೊರತು ಅಲ್ಲಿ ಎರ್ ಸ್ಟ್ರಿಪ್‌ನ್ನು ಇಂಪ್ರೂವ್ ಮಾಡುವುದರಲ್ಲಿ ಅರ್ಥವಿಲ್ಲ.

Mr. SPEAKER.—Held over question No. 467, lapses since the Hon. Member is absent.

SHORT NOTICE QUESTION AND ANSWER

Damage due to Floods in South Kanara District

31. Sri B. M. IDINABBA (Mangalore).—

Will the Minister for Revenue be pleased to state:—

(*a*) whether extraodinary loss has occurred on both the banks of Netravathi and other rivers in South Kanara District on account of floods due to heavy rains during July 1969 ;

(*b*) the estimated loss occurred :

(*c*) the extent of land affected, the number of houses collapsed and the number of houses partially damaged ;

(*d*) the relief measures taken by the Government in this behalf ?